ಪಕ್ಕದ ಹೆಣ್ಣು ಮಕ್ಕಳಿಗೆ ಅದು ನಿಜವೆನಿಸಿತು. ಅವಳು ಮತ್ತೊಬ್ಬಳಿಗೆ ಮತ್ತೊಬ್ಬಳು ಇನ್ನೊಬ್ಬಳಿಗೆ ಹೇಳುತ್ತ ಅಲ್ಲಿ ಕುಳಿತವರಿಗೆಲ್ಲರಿಗೂ ಆ ದೃಶ್ಯದ ಆಂತರ್ಯ ಗೊತ್ತಾಯಿತು. ಅವರ ಮನಸ್ಸಿನಲ್ಲಿಯೂ ಇದೇ ಸುಳಿವು ಜೀವ ಪಡೆಯುತ್ತಿತ್ತೊ ಏನೊ, ಅಲ್ಲಿ ಕುಳಿತವರೆಲ್ಲರ ಮುಖ ಕಪ್ಪಿಟ್ಟಿತು. ಎಲ್ಲರೂ ಗಂಭೀರವದನರಾಗಿ ಸುಮ್ಮನೆ ಮನೆಗೆ ಬಂದರು. ಅವರು ನಾರಾಯಣಿಯನ್ನು ಮಾತನಾಡಿಸುವ ಧೈರ್ಯ ಮಾಡಲಿಲ್ಲ. ಅವರೆಲ್ಲರೂ ನಾರಾಯಣಿಯನ್ನು ಮಾತ್ರ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅವಳ ಕಪ್ಪು ಆವರಿಸಿದ್ದ ಮುಖ, ಹೊಲಿದ ತುಟಿಗಳು, ಅವಳಿಗೆ ಅರ್ಥವಾಗುತ್ತಿತ್ತು. ಅವಳಿಗೆ ಅನಿಸುತ್ತಿತ್ತು 'ಸಾವಿರ ರೂಪಾಯಿ ಕೊಟ್ಟು ಮಜಾ ಮಾಡಲು ಯಾರಾದರೂ ಗಿರಾಕಿ ಬಂದರೆ ಅವನನ್ನು ಒದ್ದು ಹೊರಗೆ ಹಾಕಬೇಕು' ಎಂದು.

ಭಾನುಮತಿಯಿಂದ ತಡೆಯಲಾಗಲಿಲ್ಲ. 'ನಾರಾಯಣೀ, ಆ ಚಿತ್ರದಲ್ಲಿ ನೀನು ಕಾಣಲೇ ಇಲ್ಲವಲ್ಲ. ನಿನ್ನ ಮುಖವೂ ಕಾಣಲಿಲ್ಲ' ಎಂದು ಕೆದಕಿದಳು.

ಕೋಪೋದ್ರಿಕ್ತಳಾದ ನಾರಾಯಣಿ 'ಸೂಳೆಯರಿಗೆ ಮುಖವೆಲ್ಲಿರುತ್ತದೆ ತೋರಿಸಲು? ನಮಗಿರುವುದು ಗುಪ್ತಾಂಗ ಮತ್ತು ತೊಡೆಗಳು ಮಾತ್ರ. ನೋಡಲಿಲ್ವೆ ನೀನು?' ಭಾನುಮತಿ ಅಂಜಿ ಮುಂದೆ ಮಾತಾಡಲಿಲ್ಲ.

## ಮಹಾಬಳೇಶ್ವರ ಸೈಲ್

ಕೊಂಕಣಿಯ ಪ್ರಮುಖ ಕಥಾಲೇಖಕ. ಸೈಲ್ ಅವರ 'ಹಾವಠಣ' ಕಾದಂಬರಿಗೆ 2016ನೇ ಸಾಲಿನ 'ಸರಸ್ವತಿ ಸಮ್ಮಾನ್' ಪುರಸ್ಕಾರ ದೊರೆತಿದೆ. ಕಾರವಾರ ಸಮೀಪದ ಮಾಜಾಳಿ ಎಂಬ ಹಳ್ಳಿಯಲ್ಲಿ ಜನಿಸಿದ ಸೈಲ್ ಕೆಲವು ವರ್ಷ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಿದ ಬಳಿಕ ಗೋವೆಯ ಪೊಲೀಸ್ ತರಬೇತಿ ಶಾಲೆಯಲ್ಲಿ ಎರಡು ವರ್ಷ ಕೆಲಸ ಮಾಡಿ, ಬಳಿಕ ಅಂಚೆ ಇಲಾಖೆಯನ್ನು ಸೇರಿ ಪೋಸ್ಟ್ ಮಾಸ್ಟರ್ ಹುದ್ದೆಯಲ್ಲಿದ್ದು, ನಿವೃತ್ತಿಯ ನಂತರ ಗೋವೆಯ ಮಡಗಾಂವ್‌ನಲ್ಲಿ ನೆಲೆಸಿದ್ದಾರೆ.

'ತರಂಗ್', 'ಬಾಯನೆಟ್ ಫಾಯರಿಂಗ್', 'ನಿಮಾಣೊ ಅಶ್ವತ್ಥಾಮಾ' ಸೇರಿದಂತೆ ಐದು ಕಥಾಸಂಕಲನಗಳು, 'ಕಾಳಿಗಂಗಾ', 'ಅರಣ್ಯಕಾಂಡ', 'ಹಾವಠಣ', 'ಅದೃಷ್ಟ', 'ಯುಗಸಾಂವರ' ಮೊದಲಾದ ಒಂಬತ್ತು ಕಾದಂಬರಿಗಳು ಪ್ರಕಟವಾಗಿವೆ. ಮರಾಠಿಯಲ್ಲಿ ಐದು ನಾಟಕಗಳು ಮತ್ತು ಸ್ವಂತ ಕಾದಂಬರಿಯ ಅನುವಾದ 'ತಾಂಡವ್' ಪ್ರಕಟವಾಗಿದೆ. ಅವರ ಬೃಹತ್ ಚಾರಿತ್ರಿಕ ಕಾದಂಬರಿ 'ಯುಗಸಾಂವರ್'.

## ಶಾ.ಮಂ. ಕೃಷ್ಣರಾಯ

ಮೂಲತಃ ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯವರು. ಓದಿದ್ದು ಸಿದ್ದಾಪುರದಲ್ಲಿ. ನಾಲ್ಕು ದಶಕಗಳ ಕಾಲ ಗೋವಾದಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಕೊಂಕಣಿ, ಮರಾಠಿ, ಹಿಂದೀ ಭಾಷೆಯಿಂದ ಮಹತ್ವದ ಕತೆ–ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಮಹಾಬಳೇಶ್ವರ ಸೈಲ್ ಅವರ 'ಹಾವಠಣ' ಕಾದಂಬರಿಯನ್ನು ಅವರು 'ಆವಿಗೆ' ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. 'ತಾಮ್ರಪಟ', 'ರಾಧೆಯಲ್ಲ ರುಕ್ಮಿಣಿಯೂ ಅಲ್ಲ', 'ಕಾರ್ಮೆಲೀನ' ಅವರ ಅನುವಾದಿತ ಕಾದಂಬರಿಗಳು. 90ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಶಾ.ಮಂ. ಕೃಷ್ಣರಾಯರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.